# ಸಕ್ಕರೆನಾಡಿನಲ್ಲಿ ನಡೆದ 3 ದಿನಗಳ ಅಕ್ಷರ ಜಾತ್ರೆ ಸಂಪನ್ನ

## ಗಣಿ ಜಿಲ್ಲೆ ಬಳ್ಳಾರಿಯಲ್ಲಿ ಮುಂದಿನ ಸಾಹಿತ್ಯ ಸಮ್ಮೇಳನ

# ಕನ್ನಡಕ್ಕಾಗಿ ಐದು ನಿರ್ಣಯ

■ ವಿಜಯವಾಣಿ ಸುದ್ದಿಜಾಲ, ಮಂಡ್ಯ

ಕನ್ನಡ ನಾಡು-ನುಡಿಗೆ ಸಂಬಂಧಿಸಿದ ನಾನಾ ವಿಚಾರಗಳನ್ನು ಚಿಂತನೆಗೆ ಹಚ್ಚಿದ ವಿದ್ವತ್ ಗೋಷ್ಠಿ, ಜನಮನ ರಂಜಿಸಿದ ಸಾಂಸ್ಕೃತಿಕ ಕಾರ್ಯಕ್ರಮ, ಗಮನ ಸೆಳೆದ ಪುಸ್ತಕ ಮೇಳ, ಸಣ್ಣಪುಟ್ಟ ಗೊಂದಲ ಹೊರತುಪಡಿಸಿ ಮಂಡ್ಯದಲ್ಲಿ ಯಶಸ್ವಿಯಾಗಿ ನಡೆದ ಮೂರು ದಿನಗಳ ಅಕ್ಷರ ಜಾತ್ರೆಗೆ ವರ್ಣರಂಜಿತ ತೆರೆಬಿದ್ದಿದೆ. ಸಮ್ಮೇಳನದ ಕೊನೆಯ ದಿನವಾದ ಭಾನುವಾರ ಕನ್ನಡ ಭಾಷೆ ಉಳಿಸಿ ಬೆಳೆಸುವ ಮಹದಾಶಯದ ಐದು ಪ್ರಮುಖ ನಿರ್ಣಯ ಕೈಗೊಳ್ಳಲಾಯಿತು. ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಮುಂದಿನ ಸಮ್ಮೇಳನವನ್ನು ಬಳ್ಳಾರಿಯಲ್ಲಿ ನಡೆಸುವುದಾಗಿ ಕಸಾಪ ಅಧ್ಯಕ್ಷ ಡಾ.ಮಹೇಶ್ ಜೋಶಿ ಘೋಷಿಸಿದರು.

ಆದಿಚುಂಚನಗಿರಿ ಮಠಾಧೀಶ ಡಾ. ನಿರ್ಮಲಾನಂದ ನಾಥ ಸ್ವಾಮೀಜಿ, ಸಿದ್ದಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ಗೌರಿಗದ್ದೆ ದತ್ತಾಶ್ರಮದ ವಿನಯ್ ಗುರೂಜಿ ಸಾನ್ನಿಧ್ಯ ವಹಿಸಿದ್ದ ಸಮಾರೋಪದಲ್ಲಿ ಸಮ್ಮೇಳನದ ಸರ್ವಾಧ್ಯಕ್ಷ ಗೊ.ರು. ಚನ್ನಬಸಪ್ಪ, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಪಾಲ್ಗೊಂಡು ಸಮ್ಮೇಳನದ ಯಶಸ್ಸಿಗೆ ಸಾಕ್ಷಿಯಾದರು. ಬೇರೆ ಭಾಷೆಗಳನ್ನು ನಮ್ಮ ಮೇಲೆ ಹೇರುವ ಆತಂಕ ಪ್ರತೀ ಸಮ್ಮೇಳನದಲ್ಲಿ ಪ್ರತಿಧ್ವನಿಸುತ್ತಿದೆ ಎಂದು ಎಚ್‌ಡಿಕೆ ಆತಂಕ ವ್ಯಕ್ತಪಡಿಸಿದರೆ, ನಮಗೆ ಅಸ್ಮಿತೆ ನೀಡಿರುವ ಕನ್ನಡವನ್ನು ಸ್ಮರಿಸುವ ನುಡಿಹಬ್ಬ ಅರ್ಥಪೂರ್ಣ ಎಂದು ನಿರ್ಮಲಾನಂದನಾಥ ಶ್ರೀ ಮೆಚ್ಚುಗೆ ವ್ಯಕ್ತಪಡಿಸಿದರು. ಈ ಸಮ್ಮೇಳನದ ನಿರ್ಣಯಗಳು ಅನುಷ್ಠಾನಗೊಂಡ ಕುರಿತು ಮುಂದಿನ ಬಳ್ಳಾರಿ ಸಮ್ಮೇಳನದಲ್ಲಿ ವಿವರಿಸಬೇಕು. ಇಲ್ಲದಿದ್ದರೆ, ಕಸಾಪ ಅಧ್ಯಕ್ಷರ ವಿರುದ್ಧವೇ ಭಾಷಣ ಮಾಡಬೇಕಾದೀತು ಎಂದು ಹೊರಟ್ಟಿ ಎಚ್ಚರಿಸಿದರು. o ಪುಟ 2B

**88ನೇ ಸಮ್ಮೇಳನ 66 ವರ್ಷಗಳ ನಂತರ ಬಳ್ಳಾರಿಯಲ್ಲಿ ನಡೆಯಲಿದೆ. ಅದಕ್ಕೂ ಕನ್ನಡ ನಾಡಿನ ಜನತೆ ಇದೇ ರೀತಿ ಸಹಕಾರ ನೀಡಬೇಕು.**

**| ಡಾ.ಮಹೇಶ್ ಜೋಶಿ** ಕ.ಸಾ.ಪ. ಅಧ್ಯಕ್ಷ



ಭಾನುವಾರ ನಡೆದ ಸಾಹಿತ್ಯ ಸಮ್ಮೇಳನದ ಸಮಾರೋಪದಲ್ಲಿ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಶ್ರೀಸಿದ್ದಲಿಂಗ ಸ್ವಾಮೀಜಿ, ಸರ್ವಾಧ್ಯಕ್ಷ ಗೊ.ರು. ಚನ್ನಬಸಪ್ಪ, ಎಚ್.ಡಿ. ಕುಮಾರಸ್ವಾಮಿ, ಬಸವರಾಜ ಹೊರಟ್ಟಿ, ಎನ್.ಚಲುವರಾಯಸ್ವಾಮಿ, ಮಹೇಶ ಜೋಶಿ ಇತರರಿದ್ದರು.

## ಐದು ನಿರ್ಣಯಗಳು

**1** ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ-2022ರ ಎಲ್ಲ ಉಪಬಂಧಗಳು ಮತ್ತು ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮವು ಜಾರಿಗೆ ಬರಬೇಕಿದ್ದು, ಕೂಡಲೇ ಅನುಷ್ಠಾನ ಆಗಬೇಕು. ಸ್ವಾಯತ್ತತೆ ಹೊಂದಿರುವ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಚುನಾಯಿತ ಅಧ್ಯಕ್ಷರನ್ನು ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ 2022ರ 'ರಾಜ್ಯ ಮಟ್ಟದ ಸಮಿತಿ'ಯ ಉಪಾಧ್ಯಕ್ಷರಾಗಿಸಲು ತಿದ್ದುಪಡಿ ಆಗಲಿ.

**2** ರಾಜ್ಯದಲ್ಲಿರುವ ಎಲ್ಲ ಸರ್ಕಾರಿ ಕನ್ನಡ ಶಾಲೆಗಳಿಗೆ ಕಟ್ಟಡ, ವಾಚನಾಲಯ, ಆಟದ ಮೈದಾನ ಸೇರಿದಂತೆ ಇತರ ಮೂಲಸೌಕರ್ಯಗಳನ್ನು ಒದಗಿಸುವ ಮತ್ತು ಖಾಲಿ ಇರುವ ಶಿಕ್ಷಕರ ಹುದ್ದೆಗಳಿಗೆ ನೇಮಕಾತಿಯ ಕ್ರಮಕ್ಕೆ ಸರ್ಕಾರ ತ್ವರಿತ ಕ್ರಮ ಕೈಗೊಳ್ಳಬೇಕು. ಕನ್ನಡೇತರ ಶಾಲೆಗಳಿಗೆ ಕನ್ನಡ ಶಿಕ್ಷಕರನ್ನು ಕಡ್ಡಾಯವಾಗಿ ನೇಮಕ ಮಾಡಬೇಕು.

**3** ಕನ್ನಡ ಅನ್ನದ ಭಾಷೆಯಾಗಲು ಕನ್ನಡಿಗರ ಉದ್ಯೋಗಕ್ಕೆ ತಡೆಯಾಗಿ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಸರ್ಕಾರ ಸಮರ್ಪಕವಾಗಿ ಎದುರಿಸಬೇಕು. ಸರೋಜಿನಿ ಮಹಿಷಿ ವರದಿ ಶಾಸನಬದ್ಧ ಅನುಷ್ಠಾನವಾಗಲಿ.

**4** ದಾವಣಗೆರೆಯಲ್ಲಿ ನಡೆಯಬೇಕಿರುವ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಕಸಾಪ ಸಹಯೋಗದೊಂದಿಗೆ ಶೀಘ್ರ ನಡೆಯಲಿ.

**5** ರಾಜ್ಯ ಸರ್ಕಾರವು ರಾಷ್ಟ್ರಕವಿಯನ್ನು ಅತಿ ಶೀಘ್ರದಲ್ಲಿ ಘೋಷಿಸಬೇಕು.

“ ಸೃಷ್ಟಿ ವಿಕಾಸದ ಪ್ರಕ್ರಿಯೆಯಲ್ಲಿ ಭಾಷೆ ಎಂಬುದು ಅದ್ಭುತ. ನಮಗೆ ಅಸ್ಮಿತೆ ನೀಡಿರುವ ಕನ್ನಡವನ್ನು ಸ್ಮರಿಸುವ ನುಡಿಹಬ್ಬ ಅರ್ಥಪೂರ್ಣವಾಗಿದೆ. ಕನ್ನಡವನ್ನು ಉಳಿಸಬೇಕು ಎನ್ನುವುದು ಒಂದಾದರೆ ಅದನ್ನು ಬಳಸಿದರೆ ಸಾಕು ಅದು ಬೆಳೆಯುತ್ತದೆ.

**| ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ**

“ ಕನ್ನಡ ಉಳಿಸುವ ಕೆಲಸ ಸರ್ಕಾರದಿಂದ ಆಗುವುದಿಲ್ಲ. ಜನರು ಧ್ವನಿ ಎತ್ತಬೇಕು. ಕನ್ನಡ ಇಲ್ಲದಿದ್ದರೆ ನಮ್ಮತನವನ್ನು ಕಳೆದುಕೊಳ್ಳಬೇಕಾಗುತ್ತದೆ.

**| ಆರ್. ಅಶೋಕ್** ವಿಧಾನಸಭೆ ವಿರೋಧ ಪಕ್ಷದ ನಾಯಕ

“ ಭಾಷೆ ಉಳಿಸುವ ಸವಾಲು ನಮ್ಮ ಮೇಲಿದೆ. ಬೇರೆ ಭಾಷೆಗಳನ್ನು ನಮ್ಮ ಮೇಲೆ ಹೇರುತ್ತಿರುವ ಬಗ್ಗೆ ಆತಂಕ ಇರುವುದು ಪ್ರತಿ ಸಮ್ಮೇಳನದಲ್ಲೂ ಪ್ರತಿಧ್ವನಿಸುತ್ತಿದೆ.

**| ಎಚ್.ಡಿ.ಕುಮಾರಸ್ವಾಮಿ** ಕೇಂದ್ರ ಸಚಿವ

## ಹೆಬ್ಬಾಳ್ಕರ್ ಬೆಂಬಲಿಗರಿಂದ ಹಲ್ಲೆ ಯತ್ನ, ಬಿಜೆಪಿ ಪ್ರತಿಭಟನೆ | ಅರ್ಧದಿನದ ಕಲಾಪ ಆಪೋಶನ

# ಶಕ್ತಿಸೌಧದಲ್ಲಿ ಪದಯುದ್ಧ ವಿಧಾನಪರಿಷತ್‌ನಲ್ಲಿ ಕೋಲಾಹಲ

■ ವಿಜಯವಾಣಿ ಸುದ್ದಿಜಾಲ ಬೆಳಗಾವಿ

ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ವಿರುದ್ಧ ಬಿಜೆಪಿಯ ಸಿ.ಟಿ. ರವಿ ಆಕ್ಷೇಪಾರ್ಹ ಪದ ಬಳಸಿದ್ದಾರೆಂಬ ವಿಚಾರ ಗುರುವಾರ ವಿಧಾನ ಪರಿಷತ್‌ನ ಕೊನೆಯಾರ್ಧದ ಕಲಾಪವನ್ನೇ ಆಪೋಶನ ಪಡೆದುಕೊಂಡಿತು.

ಅಂಬೇಡ್ಕರ್ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಷಾ ನೀಡಿರುವ ಹೇಳಿಕೆ ವಿಚಾರವಾಗಿ ವಿಧಾನಪರಿಷತ್‌ನಲ್ಲಿ ಆಡಳಿತ ಹಾಗೂ ಪ್ರತಿಪಕ್ಷ ಸದಸ್ಯರ ನಡುವೆ ತೀವ್ರ ವಾಗ್ವಾದ ನಡೆಯಿತು. ಈ ಸಂದರ್ಭದಲ್ಲಿ ಲಕ್ಷ್ಮೀ ಹೆಬ್ಬಾಳ್ಕರ್ ವಿರುದ್ಧ ಸಿ.ಟಿ. ರವಿ ಆಕ್ಷೇಪಾರ್ಹ ಪದ ಬಳಸಿದರೆಂದು ಆಡಳಿತ ಪಕ್ಷದ ಶಾಸಕರು ಕೆರಳಿದರು. ಸಿ.ಟಿ.ರವಿ ವಿರುದ್ಧ ಕ್ರಮಕ್ಕೆ ಆಡಳಿತ ಪಕ್ಷ ಪಟ್ಟು ಹಿಡಿಯಿತು. ಇದರಿಂದಾಗಿ ಮಧ್ಯಾಹ್ನ 1ಕ್ಕೆ ಮುಂದೂಡಿಕೆಯಾಗಿದ್ದ ಸದನ ಮತ್ತೆ ಸೇರಿದಾಗ ಸಂಜೆ 5.30 ಆಗಿತ್ತು.

**ಸಿಟಿ ರವಿ ಸ್ಪಷ್ಟನೆ:** ಆಕ್ಷೇಪಾರ್ಹ ಪದ ಬಳಸಿ, ಅನುಚಿತವಾಗಿ ವರ್ತಿಸಿದ್ದಾರೆ. ಮಹಿಳೆಯನ್ನು ಅಗೌರವಿಸಿದ್ದಾರೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ನೀಡಿದ ದೂರು ಹಾಗೂ ಡಾ.ಅಂಬೇಡ್ಕರ್ ಬದುಕಿದ್ದಷ್ಟೂ ಕಾಲ ಅಪಮಾನಿಸಿದವರು ಈಗ 'ಪ್ರಸ್ಟೇಟ್' ಆಗಿ ಪ್ರತಿಭಟನೆಗೆ ಇಳಿದಿದ್ದೀರಿ ಎಂದಿದ್ದೇನೆಯೇ ಹೊರತು, ಅನುಚಿತ ಪದ ಬಳಸಿಲ್ಲ ಎಂಬ ಸಿ.ಟಿ.ರವಿ ಸಮಜಾಯಿಷಿ ಸಾರಾಂಶವನ್ನು ಸಭಾಪತಿ ವಾಚಿಸಿದರು. ಸಮಾಜದ ಮೇಲೆ ಬೀರಬಹುದಾದ ಪರಿಣಾಮದ ಬಗ್ಗೆ ಜನಪ್ರತಿನಿಧಿಗಳಿಗೆ ಅರಿವಿನ ಅಗತ್ಯವಿದ್ದು, ಗೌರವಯುತ ನಡವಳಿಕೆಯು ಮುಖ್ಯವಾಗಿದೆ. ಎಲ್ಲ ಸದಸ್ಯರು ಆತ್ಮಾವಲೋಕನ ಮಾಡಿಕೊಂಡು ಸದನದ ಘನತೆ- ಗೌರವ ಎತ್ತಿಹಿಡಿಯಬೇಕು ಎಂದು ಕಿವಿಮಾತು ಹೇಳಿದ ಸಭಾಪತಿ ಹೊರಟ್ಟಿ, ಅಧಿವೇಶನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದರು.

> **ಸುವರ್ಣ ವಿಧಾನಸೌಧದಲ್ಲಿ ಎಂಎಲ್‌ಸಿ ಸಿ.ಟಿ.ರವಿ ಮೇಲೆ ಹಲ್ಲೆ ಮಾಡಲು ಯತ್ನಿಸಿದ್ದು ತಪ್ಪು. ಸೌಧದಲ್ಲಿ ಗಲಾಟೆ ನಡೆಸಿದವರ ಮೇಲೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಕ್ರಮ ಕೈಗೊಳ್ಳಲಿದ್ದಾರೆ.**
> | ಸತೀಶ ಜಾರಕಿಹೊಳಿ ಜಿಲ್ಲಾ ಉಸ್ತುವಾರಿ ಸಚಿವ ಬೆಳಗಾವಿ

**ಪರ-ವಿರೋಧ ವಾದ:** ಸಚಿವೆ ಹೆಬ್ಬಾಳ್ಕರ್‌ಗೆ ಸಿ.ಟಿ.ರವಿ ಅವಾಚ್ಯ ಪದ ಬಳಸಿದ್ದಾರೆಂದು ಆರೋಪಿಸಿ ಕಾಂಗ್ರೆಸ್‌ನ ನಾಗರಾಜ ಯಾದವ್ ಸಭಾಪತಿಗೆ ದೂರು ನೀಡುತ್ತೇನೆಂದರು. ಶಾಸಕಿ ಉಮಾಶ್ರೀ ಕೂಡ ಈ ಮಾತಿಗೆ ಧ್ವನಿಗೂಡಿಸಿದರು. ಪ್ರತಿಭಟನೆಯ ವೇಳೆ ಸಿ.ಟಿ.ರವಿ ಪಕ್ಕದಲ್ಲಿ ನಿಂತಿದ್ದ ಜೆಡಿಎಸ್‌ನ ಟಿ.ಎ.ಶರವಣ ತಮಗೇನೂ ಕೇಳಿಸಿಲ್ಲವೆಂದರು. ಕೆಟ್ಟ ಪದ ಬಳಕೆ ಮಾಡಿಲ್ಲವೆಂದ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಘೋಷಣೆಗಳ ಗದ್ದಲದಲ್ಲಿ ಆರೋಪಿಸುವವರಿಗೆ ಪದ ಬಳಕೆ ಕೇಳಿಸಿದ್ದು ಹೇಗೆ ಎಂದು ಮರು ಪ್ರಶ್ನಿಸಿದರು.





ವಿಜಯವಾಣಿ ಚಿತ್ರಗಳು

**ಅಮಾನತಿಗೆ ಬಿಗಿ ಪಟ್ಟು:** ತನ್ನನ್ನು ನಿಂದಿಸಲಾಗಿದೆ ಎಂದು ಮಹಿಳೆ ಸ್ವತಃ ಹೇಳಿದರೆ ಕಾಯ್ದೆ ರೀತ್ಯ ಕ್ರಮಕೈಗೊಳ್ಳಬೇಕು. ಅಷ್ಟೇ ಅಲ್ಲ, ಸದನದಿಂದ ಅಮಾನತು ಮಾಡಬೇಕು ಎಂದು ಆಡಳಿತ ಪಕ್ಷದವರು ಪಟ್ಟು ಹಿಡಿದರು. ಸಭಾಪತಿ ಹೊರಟ್ಟಿ ಕೊಠಡಿಯಲ್ಲಿ ಈ ಕುರಿತು ಚರ್ಚೆಯಾಯಿತು. ಸಭಾಂಗಣದಲ್ಲಿದ್ದ ವಿಡಿಯೋ, ಆಡಿಯೋ ರೆಕಾರ್ಡ್‌ಗಳನ್ನು ತರಿಸಿಕೊಂಡು ಸಭಾಪತಿ ಪರಿಶೀಲಿಸಿದರು. ಆಕ್ಷೇಪಾರ್ಹ ಪದ ಬಳಕೆ ದೃಢಪಡಿಸುವಂತಹ ಯಾವುದೇ ಸಾಕ್ಷ್ಯಾಧಾರ, ಪುರಾವೆಗಳಿಲ್ಲವೆಂದ ಹೊರಟ್ಟಿ, ಕ್ರಮಕೈಗೊಳ್ಳಲು ನಿರಾಕರಿಸಿದರು ಎನ್ನಲಾಗಿದೆ. ಇಷ್ಟಾಗಿಯೂ ಸಭಾಪತಿ ಕೊಠಡಿಯಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವ ಎಚ್.ಕೆ.ಪಾಟೀಲ, ಸಿಎಂ ಕಾನೂನು ಸಲಹೆಗಾರ ಪೊನ್ನಣ್ಣ ಸುದೀರ್ಘ ಮಾತುಕತೆ ನಡೆಸಿದರು.

**ಜೀವಭಯದ ದೂರು:** ಸುವರ್ಣ ವಿಧಾನಸೌಧದ ಮುಖ್ಯದ್ವಾರದ ಬಳಿ ನಡೆದ ಘಟನೆಯ ಕುರಿತು ಸಭಾಪತಿಗೆ ಬಿಜೆಪಿ ಸದಸ್ಯ ಡಿ.ಎಸ್.ಅರುಣ್ ಲಿಖಿತ ದೂರು ಸಲ್ಲಿಸಿ, ಸಿ.ಟಿ.ರವಿಯವರಿಗೆ ಜೀವಭಯವಿರುವ ಕಾರಣ ಸೂಕ್ತ ಭದ್ರತೆ ನೀಡಬೇಕು ಎಂದು ಮನವಿ ಮಾಡಿದ್ದಾರೆ. ಗುರುವಾರ ಮಧ್ಯಾಹ್ನದ ಊಟ ಮುಗಿಸಿ ಕಾರಿನಲ್ಲಿ ಬಂದಾಗ ಸಿ.ಟಿ.ರವಿ ಮೇಲೆ ಹಲ್ಲೆಗೆ ಯತ್ನಿಸಿದರು. ಅಲ್ಲದೆ, ಸಿ.ಟಿ.ರವಿ ವಿರುದ್ಧ ಮತ್ತು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಪರವಾಗಿ ಘೋಷಣೆ ಕೂಗುತ್ತಿದ್ದರು. ಸುವರ್ಣಸೌಧದ ಒಳಗೆ ಬಂದು ಹಲ್ಲೆಗೆ ಯತ್ನಿಸಿದ್ದಲ್ಲದೆ ಜೀವಬೆದರಿಕೆವೊಡ್ಡಿದ್ದು, ದುಷ್ಕರ್ಮಿಗಳ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಡಿ.ಎಸ್. ಅರುಣ್ ಕೋರಿದ್ದಾರೆ.

### ಏಕವಚನ ಪ್ರಯೋಗ

ವಿವಾದದ ಕೇಂದ್ರಬಿಂದುವಾದ ಸಿ.ಟಿ.ರವಿ ವಿರುದ್ಧ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಸೋದರ ಚನ್ನರಾಜ್ ಹಟ್ಟಿಹೊಳಿ ಏರುಧ್ವನಿಯಲ್ಲಿ ಕಿಡಿಕಾರಿದರು. 'ನಿನಗೆ ತಾಯಿ, ಹೆಂಡತಿ, ಮಗಳು ಇಲ್ಲವೇನೋ' ಎಂದು ಏಕವಚನದಲ್ಲಿ ನಿಂದಿಸಿದರು.

### ಕಾರಿಡಾರ್‌ನಲ್ಲೇ ಹಲ್ಲೆಗೆ ಯತ್ನ!

ಸುವರ್ಣ ವಿಧಾನಸಭೆ ಮೊಗಸಾಲೆ ದಾಟಿ ಕಾರಿಡಾರ್‌ನಲ್ಲಿ ಸಾಗುತ್ತಿದ್ದ ಸಿ.ಟಿ.ರವಿ ಮೇಲೆ 50-60 ಜನರ ತಂಡ ಏಕಾಏಕಿ ನುಗ್ಗಿ ಅವಾಚ್ಯ ಪದಗಳಿಂದ ನಿಂದಿಸಿ ಹಲ್ಲೆಗೆ ಯತ್ನಿಸಿತು. ಜತೆಗಿದ್ದ ಪತ್ರಕರ್ತರು ಹಾಗೂ ಮಾರ್ಷಲ್‌ಗಳ ಪ್ರಯತ್ನದಿಂದ ಕೂದಲೆಳೆ ಅಂತರದಲ್ಲಿ ಸಿ.ಟಿ.ರವಿ ಪಾರಾದರು. ತಕ್ಷಣವೇ ಅಲ್ಲಿದ್ದ ಗೇಟ್ ಲಾಕ್ ಮಾಡಲಾಯಿತು. ಇದರಿಂದ ಕೆರಳಿದ ಗುಂಪು ಗೇಟ್ ತೆಗೆಯುವಂತೆ ಮಾರ್ಷಲ್‌ಗಳಿಗೆ ಆಕ್ರೋಶದಿಂದ ಬೈಯ್ದರೆ, ಸಿ.ಟಿ.ರವಿ ಅವರ ಮೇಲೆ ನಿರಂತರವಾಗಿ ಅವಾಚ್ಯ ಪದಗಳಿಂದ ನಿಂದನೆ ಆಯಿತು. ಭದ್ರತಾ ಸಿಬ್ಬಂದಿ ಸ್ಥಳದಲ್ಲಿ ಇರದ ಕಾರಣ ತ್ವೇಷಮಯ ವಾತಾವರಣ ನಿರ್ಮಾಣವಾಗಿತ್ತು. ಕೊನೆಗೆ ಸಿ.ಟಿ.ರವಿ ಅಲ್ಲಿಯೇ ಧರಣಿ ಕುಳಿತರು. ಅವರ ಬೆಂಬಲಕ್ಕೆ ಶಾಸಕರಾದ ಅಶ್ವತ್ಥನಾರಾಯಣ, ಸುನಿಲ್ ಕುಮಾರ್, ವೇದವ್ಯಾಸ ಕಾಮತ್, ಭರತ್ ಶೆಟ್ಟಿ ಮೊದಲಾದವರು ಧಾವಿಸಿಬಂದರು. 10 ನಿಮಿಷದ ತರುವಾಯ ಪೊಲೀಸರು ಸ್ಥಳಕ್ಕಾಗಮಿಸಿ ಸುವರ್ಣ ವಿಧಾನಸೌಧದ ಕಾರಿಡಾರ್‌ನಿಂದ ಉದ್ರಿಕ್ತ ಗುಂಪನ್ನು ಹೊರಹಾಕಿದರು. ನಂತರ ಹೊರಾಂಗಣದಲ್ಲಿ ನಿಂತಿದ್ದ ಸಿ.ಟಿ.ರವಿ ಕಾರ್ ಮೇಲೆ ಸಿಟ್ಟಿಗೆದ್ದ ಗುಂಪು ಕೈಯಿಂದ ಗುದ್ದಿ ಸಿಟ್ಟು ತೀರಿಸಿಕೊಂಡಿತು.

> **ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರಿಗೆ ಅವಾಚ್ಯ ಪದ ಬಳಕೆ ಮಾಡಿರುವ ಬಗ್ಗೆ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿಯವರ ವಿರುದ್ಧ ಸಭಾಪತಿಯವರು, ಪೊಲೀಸ್ ಠಾಣೆಗೆ ದೂರು ಸಲ್ಲಿಸಿರುವ ಮಾಹಿತಿ ದೊರೆತಿದೆ. ಪೊಲೀಸರು ಕ್ರಿಮಿನಲ್ ಅಪರಾಧ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲಿದ್ದಾರೆ.**
> | ಸಿದ್ದರಾಮಯ್ಯ ಸಿಎಂ

### ಸಿ.ಟಿ. ರವಿ ನಿವಾಸಕ್ಕೆ ಮುತ್ತಿಗೆ ಯತ್ನ

ಬೆಳಗಾವಿ ಅಧಿವೇಶನದಲ್ಲಿ ಸಿ.ಟಿ.ರವಿ ಅವರು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ವಿರುದ್ಧ ಅವಾಚ್ಯ ಶಬ್ದ ಬಳಸಿದ್ದಾರೆ ಎಂದು ಆರೋಪಿಸಿ ಕಾಂಗ್ರೆಸ್ ಕಾರ್ಯಕರ್ತರು ಚಿಕ್ಕಮಗಳೂರಿನ ಬಸವನಹಳ್ಳಿ ಮುಖ್ಯರಸ್ತೆಯಲ್ಲಿರುವ ಸಿ.ಟಿ.ರವಿ ಅವರ ನಿವಾಸಕ್ಕೆ ಮುತ್ತಿಗೆ ಹಾಕಲು ಗುರುವಾರ ಯತ್ನಿಸಿದರು. ಈ ವೇಳೆ ಪೊಲೀಸರು ಪ್ರತಿಭಟನಾಕಾರರನ್ನು ವಶಕ್ಕೆ ಪಡೆದು ಕೆಲ ಕಾಲದ ಬಳಿಕ ಬಿಡುಗಡೆ ಮಾಡಿದರು. ಸಿ.ಟಿ.ರವಿ ಅವರ ಮನೆಗೆ ಪೊಲೀಸ್ ಬಂದೋಬಸ್ತ್ ನೀಡಲಾಗಿದೆ. ಗುರುವಾರ ಮಧ್ಯಾಹ್ನದ ವೇಳೆಗಾಗಲೇ ಸಿ.ಟಿ.ರವಿ ಅವರ ಮನೆಗೆ ಭದ್ರತೆಗಾಗಿ ಪೊಲೀಸರನ್ನು ನಿಯೋಜಿಸಲಾಗಿತ್ತು. ಕಾಂಗ್ರೆಸ್ ಮುತ್ತಿಗೆ ಯತ್ನಕ್ಕೆ ಪ್ರತಿಯಾಗಿ ಬಿಜೆಪಿ ಕಾರ್ಯಕರ್ತರು ನಗರದಲ್ಲಿ ಸಿ.ಟಿ.ರವಿ ಪರ ಪ್ರತಿಭಟನೆ ನಡೆಸಿ ಅವರನ್ನು ಕೂಡಲೇ ಬಿಡುಗಡೆ ಮಾಡುವಂತೆ ಒತ್ತಾಯಿಸಿದರು.

» ಸಿ.ಟಿ. ರವಿ ನಿವಾಸಕ್ಕೆ ಬಿಗಿ ಭದ್ರತೆ

### ಹಕ್ಕುಬಾಧ್ಯತಾ ಸಮಿತಿಗೆ ಪ್ರಕರಣ

ಸಿ.ಟಿ.ರವಿ ಅವರು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ವಿಚಾರವಾಗಿ ಆಡಿದ ಮಾತಿನ ಬಗ್ಗೆ ವಿಧಾನಸಭೆಯಲ್ಲೂ ಕೋಲಾಹಲ ಉಂಟಾಯಿತು. ಸಿ.ಟಿ.ರವಿ ವಿರುದ್ಧ ಶಾಸಕ ಶರತ್ ಬಚ್ಚೇಗೌಡ ಮಾತನಾಡಲು ಆರಂಭಿಸಿದಾಗ ಬಿಜೆಪಿ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಕಾನೂನು ಸಚಿವ ಎಚ್.ಕೆ.ಪಾಟೀಲ್ ಮಾತನಾಡಿ, ಇಡೀ ಸದನ ಲಕ್ಷ್ಮೀ ಹೆಬ್ಬಾಳ್ಕರ್ ಅವರ ಬೆಂಬಲಕ್ಕೆ ಬರುತ್ತದೆ ಹಾಗೂ ಸದನ ಸಿ.ಟಿ.ರವಿ ಮಾತನ್ನು ಖಂಡಿಸುತ್ತದೆ ಎಂದರು. ಇದಕ್ಕೂ ಮುನ್ನ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, ಪ್ರತಿಪಕ್ಷ ನಾಯಕ ಆರ್. ಅಶೋಕ್, ಅಶ್ವತ್ಥನಾರಾಯಣ ನಡುವೆ ತೀವ್ರ ವಾಗ್ವಾದ ನಡೆಯಿತು. ಇಷ್ಟರ ನಡುವೆ ಸಿ.ಟಿ.ರವಿ ವಿರುದ್ಧ ಕಾನೂನು ಸಚಿವರು ಹಕ್ಕುಚ್ಯುತಿ ಮಂಡಿಸಿದ್ದು, ಈ ಕೋರಿಕೆಯನ್ನು ಸ್ಪೀಕರ್ ಅವರು ಹಕ್ಕು ಬಾಧ್ಯತಾ ಸಮಿತಿಗೆ ರವಾನಿಸುವುದಾಗಿ ಪ್ರಕಟಿಸಿದರು.

# ಹೆಬ್ಬಾಳ್ಕರ್ ನಿಂದನೆ ಸಿ.ಟಿ.ರವಿ ಬಂಧನ

ವಿಶ್ವವಾಣಿ ಸುದ್ದಿಮನೆ ಬೆಳಗಾವಿ: ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ವಿರುದ್ಧ ಆಕ್ಷೇಪಾರ್ಹ ಪದ ಬಳಕೆ ಮಾಡಿದ್ದಾರೆ ಎನ್ನಲಾದ ಆರೋಪ ಸಂಬಂಧ ಶುಕ್ರವಾರ ಸುವರ್ಣಸೌಧ ಅಕ್ಷರಶಃ ರಣರಂಗ ವಾಗಿ ಮಾರ್ಪಟ್ಟಿತ್ತು. ನಂತರ ನಡೆದ ಬೆಳವಣಿಗೆಯಲ್ಲಿ ಪರಿಷತ್ ಸದಸ್ಯ ಸಿ.ಟಿ.ರವಿ ಮೇಲೆ ಸಚಿವೆಯ ಆಪ್ತರು ಹಲ್ಲೆಯ ಯತ್ನ ನಡೆಸಿದ್ದಾರೆ. ಇದಾಗಿ ಕಲಾಪ ಮುಗಿಯುವ ವೇಳೆ ರವಿ ಅವರನ್ನು ಸುವರ್ಣ ಸೌಧದ ಆವರಣದಿಂದಲೇ ಬಂಧಿಸಿ ನಂತರ ಖಾನಾಪುರ ಠಾಣೆಯಲ್ಲಿ ವಿಚಾರಣೆ ನಡೆಸಿ, ಹೇಳಿಕೆ ದಾಖಲಿಸಿಕೊಂಡರು.

**ವಿಧಾನ ಪರಿಷತ್ತಿನಲ್ಲಿ ನಡೆದಿದ್ದೇನು?:** ಗುರುವಾರ ಪರಿಷತ್ತಿನ ಶೂನ್ಯವೇಳೆಯ ಬಳಿಕ, ಅಂಬೇಡ್ಕರ್ ವಿರುದ್ಧ ಕೇಂದ್ರ ಸಚಿವ ಅಮಿತ್ ಶಾ ಅವಮಾನಕರ ಹೇಳಿಕೆ ನೀಡಿದ್ದಾರೆ ಎಂದು ದೂರಿದ ಕಾಂಗ್ರೆಸ್‌ನ ಎಲ್ಲ ಸದಸ್ಯರು ಅಂಬೇಡ್ಕರ್ ಭಾವಚಿತ್ರ ಹಿಡಿದು ಚರ್ಚೆಗೆ ಪಟ್ಟು ಹಿಡಿದರು. ಪ್ರತಿಯಾಗಿ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಸಿ.ಟಿ.ರವಿ ಸೇರಿದಂತೆ ಬಿಜೆಪಿ ಸದಸ್ಯರು ಕೂಡ ಅಂಬೇಡ್ಕರ್ ಭಾವಚಿತ್ರ ಹಿಡಿದುಕೊಂಡು 'ಅಂಬೇಡ್ಕರ್ ಅವರನ್ನು ಸೋಲಿಸಿದ್ದು ಕಾಂಗ್ರೆಸ್' ಎಂದು ಘೋಷಣೆ ಕೂಗಿದರು. ಸದನದಲ್ಲಿ ಕೋಲಾಹಲ ಉಂಟಾದಾಗ ಕಲಾಪವನ್ನು ಸಭಾಪತಿ ಬಸವರಾಜ ಹೊರಟ್ಟಿ ಮುಂದೂಡಿದರು. ಕಲಾಪ ಮುಂದೂಡಿದರೂ ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರು ಸದನದ ಒಳಗೆ ಪರಸ್ಪರ ಆರೋಪ- ಪ್ರತ್ಯಾರೋಪ ಮುಂದುವರಿಸಿದರು.. ಈ ವೇಳೆ, ತಮ್ಮನ್ನು ಟೀಕೆ ಮಾಡಿದ್ದಾರೆ ಎಂದು ಸಿಟ್ಟಾದ ಸಿ.ಟಿ.ರವಿ, ಅವಾಚ್ಯ ಪದ ಬಳಸಿದರು ಎಂದು ಕಾಂಗ್ರೆಸ್ ಸದಸ್ಯರು ದೂರಿದರು.

ಮಾತಿನ ಚಕಮಕಿ ನಡೆಯುವಾಗ 'ನನ್ನ ವಿರುದ್ಧ ರವಿ ಅಸಾಂವಿಧಾನಿಕ ಪದ ಬಳಸಿದ್ದಾರೆ' ಎಂದು ಲಕ್ಷ್ಮೀ ಹೆಬ್ಬಾಳ್ಕರ್ ಗಂಭೀರ ಆರೋಪ ಮಾಡಿದರು. ಅಲ್ಲದೆ, ಸದನದಿಂದ ಹೊರಗೆ ಹೋಗಿ ಸಭಾಪತಿಗೆ ದೂರು ನೀಡಿದರು. ಆ ಬೆನ್ನಲ್ಲೇ, ಸಿ.ಟಿ.ರವಿ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಸಭಾಪತಿಗೆ ಕಾಂಗ್ರೆಸ್ ಸದಸ್ಯರು ಮನವಿ ಮಾಡಿದರು. ಲಕ್ಷ್ಮೀ ಹೆಬ್ಬಾಳ್ಕರ್ ಅವರು ದೂರು ಸ್ವೀಕರಿಸಿದ ಸಭಾಪತಿ, ಆಡಿಯೊ ವಿಡಿಯೊ ಪರಿಶೀಲನೆಗೆ ಸೂಚನೆ ನೀಡಿ, ಕಲಾಪವನ್ನು ಅನಿರ್ದಿಷ್ಟಕಾಲ ಮುಂದೂಡಲಾಯಿತು



ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರಿಗೆ ಅವಾಚ್ಯ ಪದ ಬಳಕೆ ಮಾಡಿದ್ದಾರೆ ಎಂಬ ಆರೋಪದಡಿ ಸುವರ್ಣಸೌಧದಲ್ಲಿ ಪರಿಷತ್ ಸದಸ್ಯ ಸಿ.ಟಿ.ರವಿ ಅವರನ್ನು ಪೊಲೀಸರು ಬಂಧಿಸಿದರು.

## ದೂರು ದಾಖಲು, ಬಂಧನ

ಹೆಬ್ಬಾಳ್ಕರ್ ದೂರು ನೀಡಿದ್ದರಿಂದ ಬಿಎನ್‌ಎಸ್ 173ರಲ್ಲಿ ಜಾಮೀನು ರಹಿತ ಪ್ರಕರಣ ದಾಖಲಾಗಿದ್ದು, ಸಿ.ಟಿ.ರವಿ ಅವರನ್ನು ಹಿರೇಬಾಗೇವಾಡಿ ಪೊಲೀಸರು, ಬಲವಂತಾಗಿಯೇ ಎತ್ತಿಕೊಂಡು ಬಂದು ವಾಹನದಲ್ಲಿ ಕೂರಿಸಿಕೊಂಡು ಠಾಣೆಗೆ ಕರೆದೊಯ್ದರು. ನಂತರ ಭದ್ರತೆ ದೃಷ್ಟಿಯಿಂದ ಖಾನಾಪುರ ಠಾಣೆಗೆ ಕರೆದೊಯ್ಯಲಾಯಿತು.

## ಹಲ್ಲೆಗೆ ಯತ್ನ

ವಿಧಾನಸೌಧದಿಂದ ಹೊರಗೆ ಪ್ರವೇಶ ದ್ವಾರದ ಕಾರಿಡಾರ್‌ನಲ್ಲಿ ಹೋಗುತ್ತಿದ್ದ ರವಿ ಅವರ ಮೇಲೆ ಕೆಲವರು ನುಗ್ಗಿ ಹಲ್ಲೆಗೆ ಯತ್ನಿಸಿದರು. ಈ ವೇಳೆ ಮಾರ್ಷಲ್‌ಗಳು ಅವರನ್ನು ರಕ್ಷಿಸಿದರು.

ಸಚಿವೆ ಹೆಬ್ಬಾಳ್ಕರ್ ಅವರಿಗೆ ಅವಾಚ್ಯ ಪದ ಬಳಕೆ ಮಾಡಿರುವ ಬಗ್ಗೆ ಸಿ.ಟಿ.ರವಿಯವರ ವಿರುದ್ಧ ಸಭಾಪತಿಯವರಿಗೆ ಹಾಗೂ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದು, ಪೊಲೀಸರು ಈ ಕ್ರಿಮಿನಲ್ ಅಪರಾಧ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಿದ್ದಾರೆ. ಇಂತಹ ಪದಬಳಕೆ ಒಂದು ರೀತಿಯ ಲೈಂಗಿಕ ದೌರ್ಜನ್ಯವಾಗಿದೆ. ಪೊಲೀಸರು ಸೂಕ್ತ ಕ್ರಮ ಕೈಗೊಳ್ಳಲಿದ್ದಾರೆ.

**- ಸಿದ್ದರಾಮಯ್ಯ**, ಮುಖ್ಯಮಂತ್ರಿ

ನಾನು ಸದನದಲ್ಲಿ ಯಾವುದೇ ಅಸಾಂವಿಧಾನಿಕ ಪದ ಬಳಕೆ ಮಾಡಿಲ್ಲ. ಕಾಂಗ್ರೆಸ್‌ನವರು ವಿಷಯಾಂತರ ಮಾಡುತ್ತಿದ್ದು, ಸದನದಲ್ಲಿ ಮಾತನಾಡಿದ ಯಾವುದೇ ಸಾಕ್ಷ್ಯಗಳು ಇದ್ದರೆ ಪರಿಶೀಲನೆ ಮಾಡಬಹುದು. ನಮ್ಮನ್ನು ಹೆದರಿಸುವ ತಂತ್ರ ಮಾಡಿದರೆ ಇದಕ್ಕೆ ಬಗ್ಗುವವರು ನಾವಲ್ಲ.

**- ಸಿ.ಟಿ.ರವಿ**, ಪರಿಷತ್ ಸದಸ್ಯ

## ಸಚಿವೆ ಕಣ್ಣೀರು

ಸಿ.ಟಿ.ರವಿ ಅವರು ನನ್ನ ವಿರುದ್ಧ ಅವಾಚ್ಯ ಶಬ್ದ ಬಳಕೆ ಮಾಡಿ, ನಿಂದನೆ ಮಾಡಿದ್ದಾರೆ. ನನ್ನ ಮನೆಯಲ್ಲಿ ಹೆಣ್ಣು ಮಕ್ಕಳು ಇದ್ದಾರೆ. ಒಬ್ಬ ಸಚಿವೆಯಾಗಿರುವ ನನಗೆ ಅವರು ಬಳಸಿರುವ ಪದ ಸರಿಯಲ್ಲ. ನನ್ನ ಮನಸ್ಸಿಗೆ ನೋವಾಗಿದೆ, ಸಿ.ಟಿ ರವಿ ಅವರಿಗೆ ಅಕ್ಕ-ತಂಗಿಯರು ಇಲ್ವಾ? ಎಂದು ಪತ್ರಕರ್ತರ ಎದುರು ಕಣ್ಣೀರು ಹಾಕಿದರು.